**<u>ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.</u>**

ಸಿ.ಸಿ. ನಂ.12–25

ಪಿ.ಡಬ್ಲ್ಯೂಃ1

ಸಿಡಬ್ಲ್ಯೂ–1

ಸಾಕ್ಷಿದಾರರ ಹೆಸರು : ಮಲ್ಲಿಕಾರ್ಜುನ ಅಂಗಡಿ

ತಂದೆಯ ಹೆಸರು : ಈಶ್ವರಪ್ಪ ಅಂಗಡಿ

ವಯಸ್ಸು : 35 ವರ್ಷ

ಉದ್ಯೋಗ : ಉಪ ವಲಯ ಅರಣ್ಯಾಧಿಕಾರಿ, ವ ಮೋಜಣಿದಾರ, ಅಗಸೂರು ಶಾಖೆ

ಮಾಸ್ತಿಕಟ್ಟಾ ವಲಯ

ವಾಸ : ಮಾಸ್ತಿಕಟ್ಟಾ

ದಿನಾಂಕಃ 27–03–2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**<u>ಮುಖ್ಯ ವಿಚಾರಣೆಃ</u> ಸರಕಾರದ ಪರವಾಗಿ ಸ .ಸ. ಆ ರವರಿಂದ ಃ**

1. ನಾನು ಕಳೆದ 5 ವರ್ಷಗಳಿಂದ ಮಾಸ್ತಿಕಟ್ಟಾ ವಲಯ ಅಗಸೂರು ಶಾಖೆಯಲ್ಲಿ ಉಪ ವಲಯ ಅರಣ್ಯಾಧಿಕಾರಿ ವ ಮೋಜಣಿದಾರ ನಾಗಿ ಕಾರ್ಯ ನಿರ್ವಹಿಸಿದ್ದೇನೆ .

**2.** ನಾನು ಸ್ಧ್ರಿ ಪ್ರಕರಣದಲ್ಲಿ ಪಿರ್ಯಾದಿದಾರನಾಗಿರುತ್ತೇನೆ . ವನ್ಯ ಜೀವಿ ಸಂರಕ್ಷಣಾಧಿಕಾರಿ ಕಾಯ್ದೆ 1972 ರ ಕಲಂ 55 ರಂತೆ ನನಗೆ ಪಿರ್ಯದಿ ಸಲ್ಲಿಸಲು ಅಧಿಕಾರ ಇರುತ್ತದೆ . ಈ ಕುರಿತು ರಾಜ್ಯ ಸರಕಾರದ ಅಧಿಸೂಚನೆ ಹಾಗೂ ಇಲಾಖೆಯ ದಾಖಲಾತಿ ಇರುತ್ತದೆ .

**3**. ದಿಃ7-1-2022 ರಂದು ಅಗಸೂರು ಗ್ರಾಮದ ಇರಾನಮೂಲೆಯ ನಿವಾಸಿಗಳಾದ ಲಕ್ಷ್ಮಣ ರಾಕು ಗೌಡ , ಗಣಪತಿ ಸುಕ್ರು ಗೌಡ , ಶಾಂತಾ ಗಣಪತಿ ಗೌಡ ಈ ಮೂವರು ಸೇರಿ ನಿನ್ನೆ ದಿವಸ ಅಂದರೆ ದಿಃ 06-01-2022 ರಂದು ಒಂದು ಕಾಡು ಹಂದಿ ಕೊಂದು ಅದರ ಮಾಂಸವನ್ನು ತಂದು ಮಾಂಸವನ್ನು ಮನೆಯಲ್ಲಿ ಬೇಯಿಸುತ್ತಿರುವ ಕುರಿತು ದೂರವಾಣಿ ಮೂಲಕ ಖಚಿತ ಮಾಹಿತಿ ಬಂದಿತು . ಈ ಸಬಂಧ ಸದ್ರಿ ವಿಷಯವನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಅಂಕೋಲಾ ಉಪ ವಿಭಾಗ ರವರು ಮಾಹಿತಿ ತಿಳಿಸಿ ಅವರಿಂದ ಶೋಧನಾ ವಾರಂಟ ಪಡೆದುಕೊಂಡು ಅರಣ್ಯ ರಕ್ಷಕ ಅಗಸೂರು ಗಸ್ತು ಹಾಗೂ ಪಂಚರಾದ ಚಾಸಾ 3 ಮತ್ತು 4 ರವರೊಂದಿಗೆ 1 ನೇ ಅರೋಪಿ ಮನೆಗೆ ಹೋಗಲಾಗಿ ಮನೆಯಲ್ಲಿ ಇದ್ದ ಅರೋಪಿ ನಂ 1 ರವರನ್ನು ಹೊರಗೆ ಕರೆದು ಅವರಿಗೆ ನನಗೆ ಬಂದ ಮಾಹಿತಿ ತಿಳಿಸಿ ನೀವು ಕಾಡು ಹಂದಿಯ ಮಾಂಸ ತಂದದ್ದು ನಿಜವೆ ಎಂದು ಕೇಳಿದಾಗ ಅವರು ಒಪ್ಪಿ ಕೊಂಡು ಮನೆಯಲ್ಲಿದ್ದ ಮಾಂಸ ತಂದುತೋರಿಸಿದರು . ಆಗ ಅವರಿಗೆ ಇದು ಯಾವ ಮಾಂಸ ಮತ್ತು ಎಲ್ಲಿಂದ ತಂದಿರುವಿರಿ ಎಂದು ಕೇಳಿದಾಗ ಅವರು ನಿನ್ನೆ ದಿವಸ ಗದ್ದೆ ಲಗ್ತದ ಕಾಡಿನ ಅಂಚಿನಲ್ಲಿ ಉರುಳು ಹಾಕಿ ಇಟ್ಟಿದ್ದು ರಾತ್ರಿ ಸುಮಾರು 11-00 ಗಂಟೆಗೆ ನಾಯಿ ಬೊಗಳುವುದನ್ನು ಕೇಳಿ ಯವುದೋ ಪ್ರಾಣಿ ಉರುಳಿಗೆ ಬಿದ್ದಿರಬಹುದು ಎಂದು ಉರುಳು ಹಾಕಿಟ್ಟಿದ್ದ ಸ್ಥಳಕ್ಕೆ ಹೋಗಿ ನೋಡಿದಾಗ ಉರುಳಿಗೆ ಕಾಡು ಹಂದಿ ಒಂದು ಸಿಲಿಕಿರುವುದು ಕಂಡು ಬಂದಿತು ನಂತರ ಸಹಾಯಕಕ್ಕಾಗಿ ತನ್ನ ಅರೋಪಿ 2 ಮತ್ತು 3 ರವನ್ನು ಕರೆದು ಉರುಳಿಗೆ ಸಿಲುಕಿ ಒದ್ದಾಡುತ್ತಿದ್ದ ಕಾಡು ಹಂದಿಯ ತಲೆಗೆ ಕತ್ತಿ ಯಿಂದ ಹೊಡೆದುಕೊಂದು ಅದರ ದೇಹವನ್ನು ಲಗ್ತದ ಗದ್ದೆ ಗೆ ತೆಗೆದುಕೊಂಡು ಬಂದು 3 ಜನರು ಕೊಚ್ಚಿ ಪಾಲು ಮಾಡಿಕೊಂಡು ಮನೆಗೆ ತೆಗೆದು ಕೊಂಡು ಬಂದಿರುತ್ತೇವೆ ಎಂದು ನಡೆದ ಘಟನೆ ವಿವರಿಸಿದರು ಅವರು ತಂದು ಕೊಟ್ಟಿದ್ದ ಮಾಂಸವನ್ನು ಮಹಜರ ಕ್ರಮ ಜರುಗಿಸಿ ಇಲಾಖಾ ವಶಪಡಿಸಿಕೊಂಡು ಅರೋಪಿ 1 ರ ಜೊತೆ ಪಕ್ಕದಲ್ಲಿದ್ದ 3 ನೇ ಆರೋಪಿತರ ಮನೆಗೆ ಹೋಗಲಾಗಿ ಮನೆಯಲ್ಲಿದ್ದ 3 ನೇ ಅರೋಪಿ ಹೆಂಡತಿ ಶೈಲಾ ಗಣಪತಿ ಗೌಡ ಇವರನ್ನು ಕರೆದು ಕಾಡು ಹಂದಿಯ ಮಾಂಸದ ಕುರಿತು

ವಿಚಾರಿಸಲಾಗಿ ಸದ್ರಿಯವರು ಮನೆಯಲ್ಲಿಟ್ಟಿದ್ದ ಮಾಂಸವನ್ನು ತಂದು ತೋರಿಸಿದರು . ನಂತರ ಅವರಿಗೆ 3 ನೇ ಆರೋಪಿತರ ಕುರಿತು ವಿಚಾರಿಸಲಾಗಿ ಅವರು ಕೆಲಸಕ್ಕೆ ಹೋಗಿರುವುದಾಗಿ ತಿಳಿಸಿದರು . ಅವರಿಂದ 3 ನೇ ಅರೋಪಿತರ ಮೊಬೈಲ ನಂಬರ ಪಡೆದು ಅವರಿಗೆ ಕರೆ ಮಾಡಿ ನಮ್ಮ ಇಲಾಖೆಯ ಕಚೇರಿ ಬರಲು ತಿಳಿಸಲಾಯಿತು . ಅವರು ತಂದು ಕೊಟ್ಟ ಮಾಂಸವನ್ನು ಮಹಜರ ಕ್ರಮ ಜರುಗಿಸಿ ಜಪ್ತು ಪಡಿಸಿಕೊಂಡು ನಂತರ ಅಲ್ಲಿಂದ ಅಲ್ಲೆ ಪಕ್ಕದಲ್ಲಿದ್ದ 2 ನೆ ಅರೋಪಿತರ ಮನೆಗೆ ಹೋಗಿ ಮನೆಯಲ್ಲಿದ್ದ 2 ನೆ ಅರೋಪಿಯನ್ನು ಹೊರಗೆ ಕರೆದು ಕಾಡು ಹಂದಿ ಮಾಂಸ ದ ಕುರಿತು ವಿಚಾರಿಸಲಾಗಿ ಸದ್ರಿಯವರು ಕೊಟ್ಟಿಗೆಯಲ್ಲಿಟ್ಟಿದ್ದ ಮಾಂಸವನ್ನು ತಂದು ತೋರಿಸಿದರು . ಆಗ ಇವರಿಗೆ ಇದು ಯಾವ ಮಾಂಸ ಎಂದು ಕೇಳಿದಾಗ ಅವರು ನಿನ್ನೆ ದಿವಸ ನಾನು ಆರೋಪಿ 1 ಮತ್ತು 3 ರವರು ಸೇರಿ ಉರುಳಿಗೆ ಸಿಲುಕಿ ಒದ್ದಾಡುತ್ತಿದ್ದ ಕಾಡು ಹಂದಿ ಕೊಂದು ಅದನ್ನು ಕೊಚ್ಚಿ ಪಾಲು ಮಾಡಿಕೊಂಡು ಮನೆಗೆ ತಂದಿರುವುದಾಗಿ ತಿಳಿಸಿದರು . ಸದ್ರಿಯವರಿಗೆ ಈ ಕೃತ್ಯವು ವನ್ಯ ಜೀವಿ ಸಂರಕ್ಷಣಾ ಕಾಯ್ದೆ 1972 ರಂತೆ ಅಪರಾಧವಾಗಿರುತ್ತದೆ ಎಂದು ತಿಳಿಸಿ ಅವರು ತಂದು ಕೊಟ್ಟ ಮಾಂಸವನ್ನು ಮಹಜರ ಕ್ರಮ ಜರುಗಿಸಿ ಇಲಾಖಾ ವಶಕ್ಕೆ ಪಡೆಯಲಾಯಿತು ಮತ್ತು 1 ಮತ್ತು 2 ನೆ ಅರೋಪಿತರನ್ನು ಹೆಚ್ಚಿನ ವಿಚಾರಣೆಗಾಗಿ ಇಲಾಖಾ ಕಚೇರಿಗೆ ಇಲಾಖಾ ವಾಹನದಲ್ಲಿ ಕರೆದು ಕೊಂಡು ಹೋದೆವು . ಸದ್ರಿ ವಿಚಾರವನ್ನು ನಾನು ಪಿರ್ಯಾದೆ ನೀಡಿರುತ್ತೇನೆ .

4. ಸಾಕ್ಷಿ ಗೆ ಪಿರ್ಯಾದೆ ತೋರಿಸಲಾಗಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿರುವುದರಿಂದ ನಿಪಿ-1 ಎಂದು ,ಸಾಕ್ಷಿಯ ಸಹಿಯನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿ 1 ಮತ್ತು 3 ರವರನ್ನು ನೋಡಿ ಗುರುತಿಸಿರುತ್ತಾರೆ . ಸಾಕ್ಷಿಗೆ ಪಂಚನಾಮೆ ತೋರಿಸಲಾಗಿದ್ದು ಸಾಕ್ಷಿಯ ನೋಡಿ ಗುರುತಿಸಿರುವುದರಿಂದ ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿರುವುದರಿಂದ ನಿಪಿ-2 (ಎ) ಎಂದು , ಸಾಕ್ಷಿಗೆ 3 ಪೊಟೊ ಹಾಗೂ ಸಿಡಿಯನ್ನು ತೋರಿಸಲಾಗಿದ್ದು ಸಾಕ್ಷಿ ನೋಡಿ ಗುರುತಿಸಿರುವುದರಿಂದ 3 ಪೊಟೊಗಳನ್ನು

ನಿಪಿ-3 ರಿಂದ 5 ಹಾಗೂ ಸಿಡಿಗಳನ್ನು ನಿಪಿ-6 ಎಂದು ಗುರುತಿಸಲಾಯಿತು . ವಿಷಯ ಗೊತ್ತಾದ ಕೂಡಲೆ ನಾನು ನನ್ನ ಮೇಲಾಧಿಕಾರಿಗಳಿಂದ ಸರ್ಚ ವಾರಂಟ ಪಡೆದು ಕೊಂಡಿರುತ್ತೇನೆ ಸದ್ರಿ ಸರ್ಚ ವಾರಂಟ ವನ್ನು ಸಾಕ್ಷಿ ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-7 ಎಂದು ಗುರುತಿಸಲಾಯಿತು . ವಿಚಾರಣಾ ಸಮಯದಲ್ಲಿ ಆರೋಪಿತರು ಕಾಡು ಹಂದಿಯ ಉಳಿದ ಭಾಗಗಳನ್ನು ಬಚ್ಚಿಟ್ಟಿದ್ದ ಸ್ಥಳವನ್ನು ಹಾಗೂ ಉರುಳು ಹಾಕಿದ ಸ್ಥಳವನ್ನು ತೋರಿಸಲು ಒಪ್ಪಿ ಕೊಂಡಂತೆ 1 ನೆ ಅರೋಪಿಯನ್ನು ಕರೆದುಕೊಂಡು ವಲಯ ಅರಣ್ಯಾಧಿಕಾರಿಯೊಂದಿಗೆ ಹಾಗೂ ಪಂಚ ರೊಂದಿಗೆ ಇಲಾಖಾ ವಾಹನದಲ್ಲಿ 2 ನೆ ಅರೋಪಿ ಮನೆ ಹತ್ತಿರ ಹೋಗಿ ಅಲ್ಲಿ ವಾಹನದಿಂದ ಇಳಿದು 1 ನೆ ಅರೋಪಿಗೆ ಕಾಡು ಹಂದಿಯ ಉಳಿದ ಭಾಗಗಳನ್ನು ಎಲ್ಲಿ ಬಚ್ಚಿಟ್ಟಿರುವುದು ಎಂದು ಕೇಳಿದಾಗ ಅವರು 2 ನೇ ಆರೋಪಿತರ ಮನೆಯ ಮುಂದುಗಡೆಯ ಕಾಲುವೆ ಹತ್ತಿರ ಕರೆದು ಕೊಂಡು ಹೋಗಿ ಬಚ್ಚಿಟ್ಟಿದ್ದ ಸ್ಥಳ ಕೈ ಮಾಡಿ ತೋರಿಸಿದರು . ಸದ್ರಿ ತೋರಿಸಿದ ಜಾಗದಲ್ಲಿನ ಮಣ್ಣನ್ನು ಅಗೆಯಲಾಗಿ ಅಲ್ಲಿ ಕಾಡು ಹಂದಿಯ ತಲೆ ಭಾಗ , ಕಾಲಿನ ಭಾಗಗಳು , ಹಾಗು ಕರುಳು ಹಾಗೂ ಹೊಟ್ಟೆಯ ಭಾಗಗಳು ಕಂಡು ಬಂದಿರುತ್ತದೆ . ನಂತರ 1 ನೆ ಅರೋಪಿತನಿಗೆ ಉರುಳು ಹಾಕಿದ ಸ್ಥಳವನ್ನು ತೋರಿಸಲು ಕೇಳಿದಾಗ ಅಲ್ಲಿಂದ ಅಂದಾಜು 40 ಮೀಟರ ದೂರದಲ್ಲಿ ಕಾಡಿನ ಅಂಚಿಗೆ ಕರೆದುಕೊಂಡು ಹೋಗಿ ಉರುಳು ಹಾಕಿದ ಸ್ಥಳ ತೋರಿಸಿದರು . ನಂತರ ಅವರಿಗೆ ಹಂದಿಗೆ ಹಾಕಿದ ಉರುಳು ಎಲ್ಲಿದೆ ಎಂದು ಕೇಳಿದಾಗ ಅವರು ಮನೆಯಲ್ಲಿರುವುದಾಗಿ ತಿಳಿಸಿ ಮನೆಯಲ್ಲಿ ಇದ್ದ ಉರುಳನ್ನು ತಂದು ತೋರಿಸಿದರು . ಸದ್ರಿ ಉರುಳು ಮತ್ತು ಸ್ಥಳದಲ್ಲಿ ಸಿಕ್ಕ ಹಂದಿಯ ಇತರ ಭಾಗಗಳನ್ನು ಮಹಜರ ಕ್ರಮ ಜರುಗಿಸಿ ಇಲಾಖಾ ವಶಕ್ಕೆ ಜಪ್ತು ಪಡಿಸಿಕೊಂಡೆವು. ಸಾಕ್ಷಿಗೆ ಸದ್ರಿ ಪಂಚನಾಮೆ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-8 ಎಂದು, 4 ಪೊಟೊಗಳನ್ನು ಸಾಕ್ಷಿ ನೋಡಿ ಗುರುತಿಸಿರುವುದರಿಂದ ನಿಪಿ-9 ರಿಂದ 12 ಎಂದು ಗುರುತಿಸಲಾಯಿತು . ಸದ್ರಿ ಸ್ಥಳದ 2 ಕಚ್ಚಾ ನಕ್ಷೆಯನ್ನು ತೋರಿಸಲಾಗಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿರುವುದರಿಂದ ನಿಪಿ-13 ಮತ್ತು 14

ಎಂದು ಸಾಕ್ಷಿಯು ಸಹಿಯನ್ನು ನೋಡಿ ಗುರುತಿಸಿರುವುದರಿಂದ ನಿಪಿ–13 (ಎ) ಮತ್ತು 14 (ಎ) ಎಂದು ಗುರುತಿಸಲಾಯಿತು . ಆಗ ಸದ್ರಿ ಸ್ಥಳದ GPS ಸರ್ವೆ ಮತ್ತು ಮ್ಯಾಪ ನ್ನು ತೆಗೆದುಕೊಳ್ಳಲಾಗಿರುತ್ತದೆ . ಸದ್ರಿ GPA ಸರ್ವೆ ಮತ್ತು ಮ್ಯಾಪ ನ್ನು ಸಾಕ್ಷಿ ನೋಡಿ ಗುರುತಿಸಿರುವುದರಿಂದ ನಿಪಿ–15 ಸಾಕ್ಷಿಯ ಸಹಿಯನ್ನುನಿಪಿ–15 (ಎ) ಎಂದು ಗುರುಸಲಾಯಿತು . ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ ತಂತಿಯ ಉರುಳನ್ನು ತೋರಿಸಲಾಗಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿರುವುದರಿಂದ ಅದನ್ನು ಮು.ಮಾ–1 ಎಂದು ಗುರುತಿಸಲಾಯಿತು . ಸದ್ರಿ ಕೃತ್ಯಕ್ಕೆ ಬಳಸಿದ ಜಾಗದ RTC and notification ವನ್ನು ಸಾಕ್ಷಿ ನೋಡಿ ಗುರುತಿಸಿರುವುದರಿಂದ ಸದ್ರಿ ದಾಖಲಾತಿಗಳನ್ನು ನಿಪಿ–16 ಮತ್ತು 17 ಎಂದು ಗುರುತಿಸಲಾಯಿತು . ನಿಪಿ–11 ರಲ್ಲಿರುವ ಪೋಟೋದಲ್ಲಿರುವ ಮಾಂಸವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ .

4. ದಿಃ8–1–2022 ರಂದು ಸದ್ರಿ ಮೃತ ಕಾಡು ಹಂದಿಯ ಮರಣೋತ್ತರ ಪರೀಕ್ಷೆಯನ್ನು ಪಶು ವೈದ್ಯಾಧಿಕಾರಿಯಾದ ಚಾಸಾ–7 ರವರಿಂದ ಸದ್ರಿ ಕಾಡು ಹಂದಿಯ ಮಾಂಸದ ಮಾದರಿಗಳನ್ನು ರಾಸಾಯನಿಕ ಪ್ರಯೋಗಾಲಯಕ್ಕೆ ಕಳುಹಿಸಿಕೊಡಲಾಗಿರುತ್ತದೆ . ಆ ಸಮಯದಲ್ಲಿ ಮಹಜರ ಕ್ರಮ ಜರುಗಿಸಿರುತ್ತೇವೆ ಸದ್ರಿ ಮಹಜರ ವನ್ನು ಸಾಕ್ಷಿಗೆ ತೋರಿಸಲಾಗಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿರುವುರಿಂದ ನಿಪಿ–18 ಎಂದು ಸಾಕ್ಷಿಯ ಸಹಿಯನ್ನು ನಿಪಿ–18 (ಎ) ಎಂದು ಗುರುತಿಸಲಾಯಿತು . ನಂತರ ಅದೇ ದಿವಸ ನ್ಯಾಯಾಲಯದ ಅನುಮತಿ ಪಡೆದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಅಂಕೋಲಾ ಉಪ ವಿಭಾಗ ಹಾಗೂ ಪಂಚರ ಸಮಕ್ಷಮ ವಲಯ ಅರಣ್ಯಾಧಿಕಾರಿಗಳ ಕಚೇರಿಯ ಆವರಣದಲ್ಲಿ ಆ ಕಾಡು ಹಂದಿಯ ಮಾಂಸವನ್ನು ಸಂಪೂರ್ಣವಾಗಿ ಸುಡಲಾಯಿತು . ಆ ಸಮಯದಲ್ಲಿ ಮಹಜರ ಕ್ರಮ ಜರುಗಿಸಿ ಪೋಟೋ ಮತ್ತು ವಿಡಿಯೋ ತೆಗಯಲಾಗಿರುತ್ತದೆ . ಸದ್ರಿ ಮಹಜರ ವನ್ನು ಸಾಕ್ಷಿಗೆ ತೋರಿಸಲಾಗಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿರುವುರಿಂದ ನಿಪಿ–19 ಸಾಕ್ಷಿಯ ಸಹಿಯನ್ನು ನಿಪಿ–19 (ಎ) ಎಂದು ಗುರುತಿಸಲಾಯಿತು .

ಅದೇ ರೀತಿ ಕಾಡು ಹಂದಿ ಸುಟ್ಟ 3 ಪೊಟೊ ತೋರಿಸಲಾಗಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುರಿಸಿರುವುರಿಂದ ಅವುಗಳನ್ನು ಒಟ್ಟಾರೆ ಯಾಗಿ ನಿಪಿ–20 ಎಂದು ಗುರುತಿಲಾಯಿತು . 1 ರಿಂದ 3 ಅರೋಪಿತರ ಮನೆಯ ಹಾತ್ ನಕಾಶೆ ತಯಾರಿಸಲಾಗಿ ಅದನ್ನು ಕಡತದಲ್ಲಿ ಅಳವಡಿಸಲಾಗಿರುತ್ತದೆ . ಸದಿರ ಹಾತ್ ನಕಾಶೆಯನ್ನು ಸಾಕ್ಷಿ ನೋಡಿ ಗುರುತಿಸಿರುವುರಿಂದ ನಿಪಿ–21 ರಿಂದ 23 ಎಂದು ಗುರುತಿಸಲಾಯಿತು . ಈ ಪ್ರಕರಣದ ಮುಂದಿನ ತನಿಖೆಗಾಗಿ ಕಡತವನ್ನು ನನ್ನ ಮೇಲಾಧಿಕಾರಿಗೆ ಹಸ್ತಾಂತರಿಸಿರುತ್ತೇನೆ . _

( **ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು** .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.